# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 318/2022

| | | |
|---|---|---|
| ಹೆಸರು | : | ರಾಕೇಶ್ |
| ತಂದೆಯ ಹೆಸರು | : | ಜಯರಾಮ ರೈ |
| ಪ್ರಾಯ | : | 43 ವರ್ಷ |
| ಉದ್ಯೋಗ | : | ಕೃಷಿ |
| ವಾಸ | : | ಪಡಂಗಡಿ ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 16.12.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 3.10.2021 ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ನಾನು ನನ್ನ ತಾಯಿ ಪುಷ್ಪವತಿ ಚಾಸಾ3 ರವರು ಮತ್ತು ಚಾಸಾ2 ರವರು ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ನಮ್ಮ ತೋಟದ ಹತ್ತಿರದ ಮನೆಯವರಾದ ಅಬ್ದುಲ್ ರೆಹಮಾನ್ ಮತ್ತು ಅವರ ಅಣ್ಣನಾದ ಹಮೀದ್ ಅವರ ಹೆಂಡತಿ ಜೈನಾಬಿ ಮತ್ತು ಮಗ ನೌಷಾದ್ ಹಾಗೂ ಅವರ ತಮ್ಮ ಅಬ್ಬಾಸ್ ಅವರ ಹೆಂಡತಿ ಫಾತಿಮತ್ ಜೊಹರಾ ಅವರ ತಮ್ಮ ಹಸೈನರ್ ಅವರ ಹೆಂಡತಿ ಅಮೀನ ಹಾಗೂ ಮೊಹಮ್ಮದ್ ರವರ ಹೆಂಡತಿ ಜೀನತ್ ಹಾಗೂ ಅವರ ಅಕ್ಕ ಶಫೀಯಾ ಎಲ್ಲರೂ ಸೇರಿ ನಮ್ಮನ್ನು ಸುತ್ತುವರೆದು ನಮ್ಮ ಪಟ್ಟಾ ಜಾಗದಲ್ಲಿ ಕೆಲಸ ಮಾಡದಂತೆ ರಂಡೆ ಮಗ, ಬೇವರ್ಸಿ ಮಗ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಅಬ್ದುಲ್ ರೆಹಮಾನ್, ಹಮೀದ್, ನೌಷಾದ್, ಅಬ್ಬಾಸ್, ಹಸೈನಾರ್ ರವರುಗಳು ನನ್ನನ್ನು ಕೈಯಿಂದ ದೂಡಿ ಹಾಕಿರುತ್ತಾರೆ, ಆಗ ನಾನು ನೆಲಕ್ಕೆ ಬಿದ್ದಿರುತ್ತೇನೆ. ಆಗ ಚಾಸಾ2 ಮತ್ತು 3 ರವರು ತಡೆಯಲು ಬಂದಾಗ ಜೈನಾಬು, ಫಾತಿಮತ್ ಜೊಹರಾ, ಅಮೀನ, ಸಫೀಯಾ, ಜೀನತ್ ರವರುಗಳು ಚಾಸಾ2 ಮತ್ತು 3 ರವರನ್ನು ದೂಡಿ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ

ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಗಲಾಟೆಯಾಗುವಾಗ ಜನರು ಸೇರಿದ್ದರು ಅವರ ಪರಿಚಯ ನನಗೆ ಅಷ್ಟಾಗಿ ಇರುವುದಿಲ್ಲ. ನಂತರ ನಾವು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಜಾಗಕ್ಕೆ ಸಂಬಂಧಪಟ್ಟಂತೆ ಪೊಲೀಸರಿಗೆ ಪಹಣಿ ಪತ್ರಿಕೆಗಳನ್ನು ನೀಡಿದ್ದೇನೆ. ಸದರಿ ಪಹಣಿ ಪತ್ರಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಮತ್ತು 4ನೇ ಆರೋಪಿತರನ್ನು ನೋಡಿ ಗುರುತಿಸಿದ್ದು, 1, 5 ರಿಂದ 10 ನೇ ಆರೋಪಿತರು ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿಃ 26.10.2021 ರಂದು ಹಮೀದ್ ರವರ ಮಗನ ಹೆಸರು ತಪ್ಪಿ ತೌಸಿಕ್ ಎಂದು ಹೇಳಿದ್ದು ಅವರ ಸರಿಯಾದ ಹೆಸರು ನೌಷದ್ ಎಂದು ಮರುಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಆರೋಪಿತರು ನನ್ನನ್ನು ದೂಡಿ ಹಾಕಿದಾಗ ಚಾಸಾ4 ಮತ್ತು 5 ಹಾಗೂ ಆಟೋ ಚಾಲಕ ಚಾಸಾ6 ರವರು ನಮ್ಮ ಹತ್ತಿರ ಬರುವಾಗ ಆರೋಪಿತರು ಓಡಿಹೋಗಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ 1, 2 4 ರಿಂದ 10ನೇ ಆರೋಪಿತರ ಪರ ಶ್ರೀ. ಎಸ್.ಎಲ್.ಎ ವಕೀಲರಿಂದಃ

ನಮ್ಮ ಮತ್ತು ಆರೋಪಿತರ ಪರಿಚಯ ಸುಮಾರು 25 ವರ್ಷಗಳಿಂದ ಇರುತ್ತದೆ. ನಮ್ಮ ಮನೆಯಿಂದ ಆರೋಪಿತರ ಮನೆ 500 ಮೀಟರ್ ದೂರದಲ್ಲಿ ಇದೆ. ನಮ್ಮ ಮತ್ತು ಆರೋಪಿತರ ನಡುವೆ ಮಾತುಕತೆ 2020 ರಿಂದ ಇರುವುದಿಲ್ಲ. ಜಾಗದ ತಕರಾರಿಗೆ ಸಂಬಂಧಪಟ್ಟಂತೆ ನಮ್ಮ ಮತ್ತು ಅವರ ನಡುವೆ ಮಾತುಕತೆ ಇರುವುದಿಲ್ಲ. ನಮ್ಮ ವಿರುದ್ಧವು ಸಹ ಆರೋಪಿತರು ಒಂದು ಪ್ರಕರಣವನ್ನು ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದಾರೆ. ಜಾಗಕ್ಕೆ ಸಂಬಂಧಪಟ್ಟಂತೆ ನಮ್ಮಲ್ಲಿ ಸಿವಿಲ್ ಪ್ರಕರಣಗಳು ಸಹ ಬಾಕಿ ಇವೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನಮ್ಮ ಮನೆಯ ಹತ್ತಿರ

ತೋಟದಲ್ಲಿ ಒಂದು ಬಾರಿ ವಿಚಾರಣೆ ಮಾಡಿದ್ದಾರೆ, ಯಾವಾಗ ಎಂದರೆ ಸಾಕ್ಷಿ ದಿಃ 4.10.2021 ಎಂದು ಹೇಳುತ್ತಾರೆ. ತಕ್ಷೀರು ಸ್ಥಳದಿಂದ ಪೊಲೀಸ್ ಠಾಣೆ ಎಷ್ಟು ದೂರ ಎಂದರೆ ಸಾಕ್ಷಿ 7 ಕಿ.ಮೀ ಎಂದು ಹೇಳುತ್ತಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಗೆ ನಾನು ದಿಃ 3.10.2021 ರಂದು ಹೋಗಿರುತ್ತೇನೆ. ಆಗ ಸಮಯ ಬೆಳಿಗ್ಗೆ 12 ಗಂಟೆಯಾಗಿತ್ತು.

2. ದೂರನ್ನು ನಾನು ಹೇಳಿದ ರೀತಿಯಲ್ಲಿ ಪೊಲೀಸರು ಬರೆದುಕೊಂಡಿರುತ್ತಾರೆ. ಪೊಲೀಸ್ ಠಾಣೆಗೆ ನಾನು ಮಾತ್ರ ಹೋಗಿದ್ದೆ. ಪೊಲೀಸ್ ಠಾಣೆಯಲ್ಲಿ ನಾನು 12 ರಿಂದ 2 ಗಂಟೆಯವರೆಗೆ ಇದ್ದೆ. ನಮ್ಮ ಮತ್ತು ಆರೋಪಿತರ ಜಾಗ ಒಂದಕ್ಕೊಂದು ತಾಗಿಕೊಂಡಿರುತ್ತದೆ. ಘಟನೆಯಾಗುವ ಪೂರ್ವದಲ್ಲಿ ಜಾಗಕ್ಕೆ ಸಂಬಂಧಪಟ್ಟಂತೆ ತಕರಾರು ಆಗಿದೆಯಾ ಎಂದರೆ ಹೌದು, ಯಾವಾಗ ಎಂದರೆ 2020 ರಲ್ಲಿ ಎಂದು ಹೇಳುತ್ತಾರೆ. ಅವರ ಜಾಗ ನಮ್ಮ ಸ್ವಾದೀನದಲ್ಲಿ ಇದೆ ಎಂದು 2020 ರಲ್ಲಿ ಆರೋಪಿತರು ನಮಗೆ ಕೇಳಿದ್ದರು ಆಗ ಜಗಳ ಆಗಿತ್ತು. ಆ ಬಗ್ಗೆ ದೂರು ನೀಡಿದ್ದೀರಾ ಎಂದರೆ ಹೌದು. ಆ ದೂರು ಏನಾಗಿದೆ ಎಂದರೆ ಸಾಕ್ಷಿ ಪೊಲೀಸರು ಜಂಟಿ ಸರ್ವೇ ಮಾಡಿಸಿ ಎಂದು ಹೇಳಿ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆ ದೂರಿನ ಪ್ರತಿ ನನ್ನ ಹತ್ತಿರ ಇರುತ್ತದೆ. ಆ ಪ್ರಕಾರ ನಾವು 2020 ರಲ್ಲಿ ಸರ್ವೇ ಮಾಡಿಸಿದ್ದೇವೆ. ಆ ಬಗ್ಗೆ ನಕ್ಷೆ ಇದೆಯಾ ಎಂದರೆ ಹೌದು. ಆರೋಪಿತರು ನಮ್ಮ ವಿರುದ್ದ ಅವರ ಜಾಗ ನಮ್ಮ ಸ್ವಾದೀನದಲ್ಲಿ ಇದೆ ಅದನ್ನು ಬಿಟ್ಟುಕೊಡಬೇಕೆಂದು ಸಿವಿಲ್ ವ್ಯಾಜ್ಯ ಮಾಡಿದ್ದಾರೆ ಎಂದರೆ ಸರಿ.

3. ತಕ್ಷೀರು ಸ್ಥಳದ ಹತ್ತಿರ ಯಾರದೆಲ್ಲಾ ಮನೆ ಇವೆ ಎಂದರೆ ಸಾಕ್ಷಿ 1ನೇ ಆರೋಪಿಯ ಮನೆ ಇರುತ್ತದೆ. ಅಲ್ಲದೆ ಸಂತೋಷ್ ರವರ ಮನೆಯೂ ಸಹ ಇರುತ್ತದೆ. ಇತರ ಬೇರೆ ಮುಸ್ಲಿಂ ಸಮುದಾಯದವರ ಮನೆ ಸಹ ಇರುತ್ತದೆ. ಗಲಾಟೆಯಾಗುವಾಗ ನೆರೆಕೆರೆಯವರು ಸೇರಿದ್ದರು. ಆ ದಿನ ಜಾಗಕ್ಕೆ ಎಷ್ಟು ಗಂಟೆಗೆ ಯಾಕೆ ಹೋಗಿದ್ದಿರಿ ಎಂದರೆ ಸಾಕ್ಷಿ ಬೆಳಿಗ್ಗೆ 8.30 ಗಂಟೆಗೆ ಅಡಿಕೆ ಗಿಡ ನೆಡಲು ಹೋಗಿದ್ದೆವು ಎಂದು ಹೇಳುತ್ತಾರೆ. ಆ ಸಮಯದಲ್ಲಿ ಗೊಬ್ಬರವು ಸಹ ಸ್ಥಳದಲ್ಲಿ ಇತ್ತು. ತಕ್ಷೀರು ಸ್ಥಳದಿಂದ 1ನೇ ಆರೋಪಿಯ ಮನೆ 150 ಮೀಟರ್ ದೂರದಲ್ಲಿ ಇರುತ್ತದೆ. ಎಲ್ಲಾ ಆರೋಪಿತರು ಒಟ್ಟಿಗೆ ಬಂದಿರುತ್ತಾರೆ. ಅವರ ಕೈಯಲ್ಲಿ ಏನಾದರೂ ಇದ್ದವಾ ಎಂದರೆ ಇಲ್ಲ. ಆರೋಪಿತರು ಒಬ್ಬೊಬ್ಬರು ಒಂದೊಂದು ದಿಕ್ಕಿನಿಂದ ಬಂದಿರುತ್ತಾರೆ. ನಾನು ಒಂದು ಕಡೆ, ನನ್ನಿಂದ ಸುಮಾರು 10 ಅಡಿ ದೂರದಲ್ಲಿ ಚಾಸಾ2 ಮತ್ತು 3 ರವರು ಕೆಲಸ ಮಾಡುತ್ತಿದ್ದರು. ನಮ್ಮಿಂದ ಸುಮಾರು 150

ಮೀಟರ್ ದಲ್ಲಿ ಚಾಸಾ4 ಮತ್ತು 5 ರವರು ಕೆಲಸ ಮಾಡುತ್ತಿದ್ದರು. ಚಾಸಾ6 ರವರು ಬರುವಾಗ ಬೆಳಿಗ್ಗೆ 9.45 ಗಂಟೆಯಾಗಿತ್ತು. ಘಟನೆ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಆಗಿದೆ ಎಂದರೆ 9.00 ಗಂಟೆಯಿಂದ 10 ಗಂಟೆಯವರೆಗೆ ಆಗಿದೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನೆರೆಕೆರೆಯವರು ಬಂದಿರುತ್ತಾರೆ. ಚಾಸಾ4 ಮತ್ತು 5 ರವರು ಬರುವಾಗ ಆರೋಪಿತರು ಸ್ಥಳದಲ್ಲಿಯೇ ಇದ್ದರು. ಚಾಸಾ4 ಮತ್ತು 5 ರವರು ಹತ್ತಿರ ಬರುವುದನ್ನು ನೋಡಿ ತಕ್ಷಣ ಆರೋಪಿತರು ಹೊರಟುಹೋಗಿರುತ್ತಾರೆ. 5 ಜನರೂ ಸಹ ಒಟ್ಟಿಗೆ ನನ್ನನ್ನು ಹಿಡಿದು ದೂಡಿರುತ್ತಾರೆ. ಆಗ ನನ್ನ ಮೈಕೈ ನೋವಾಗಿರುತ್ತದೆ. 1ನೇ ಆರೋಪಿ ನನಗೆ ಕೈಯಿಂದ ಎಡಭುಜಕ್ಕೆ ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ2 ಮತ್ತು 3 ರವರು ಹತ್ತಿರದಲ್ಲೆ ಇದ್ದು ಸ್ಥಳಕ್ಕೆ ಬಂದು ನನ್ನನ್ನು ಎಬ್ಬಿಸಿರುತ್ತಾರೆ. 5 ಜನ ಹೆಂಗಸು ಆರೋಪಿತರು ಚಾಸಾ2 ಮತ್ತು 3 ರವರನ್ನು ಒಟ್ಟಿಗೆ ತಳ್ಳಿ ಬೀಳಿಸಿರುತ್ತಾರೆ. ನಾನು ಬೊಬ್ಬೆ ಹೊಡೆಯುವುದನ್ನು ಕೇಳಿ ಚಾಸಾ2 ಮತ್ತು 3 ರವರು ಸ್ಥಳಕ್ಕೆ ಬಂದಿರುತ್ತಾರೆ. ಚಾಸಾ2 ಮತ್ತು 3 ರವರ ಕೆಳಗೆ ಬಿದ್ದ ಕಾರಣ ಮೈಕೈ ನೋವಾಗಿರುತ್ತದೆ. ಈ ಸಂಬಂಧ ಆಸ್ಪತ್ರೆಗೆ ಹೋಗಿದ್ದರಾ ಎಂದರೆ ಇಲ್ಲ. ಸ್ಥಳದಿಂದ ಪ್ರಥಮವಾಗಿ ನಾವು ಹೊರಟುಹೋಗಿರುತ್ತೇವೆ.

4. ಚಾಸಾ4 ರವರು ನನ್ನ ತಂಗಿಯ ಗಂಡ. ಅವರು ಗೇರುಕಟ್ಟೆಯಲ್ಲಿ ವಾಸವಿದ್ದಾರೆ. ಚಾಸಾ5 ರವರು ನಮ್ಮ ಮನೆಗೆ ಕೆಲಸಕ್ಕೆ ಬಂದಿದ್ದರು, ಅವರು ನನ್ನ ಸ್ನೇಹಿತರು. ಚಾಸಾ6 ರವರು ಸ್ಥಳಕ್ಕೆ ಬಂದಾಗ ಆರೋಪಿತರು ಹೊರಟುಹೋಗಿರುತ್ತಾರೆ. ಆಗ ಸಮಯ 9.30 ಗಂಟೆಯಾಗಿತ್ತು. ನಾನು ಹೇಳಿದ ಪ್ರಕಾರ ಆರೋಪಿತರು ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಜಾಗಕ್ಕೆ ಸಂಬಂಧಪಟ್ಟಂತೆ ತಕರಾರು ಇರುವುದರಿಂದ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)